**CENTRAL BOARD OF SECONDARY EDUCATION**

**SUBJECT: KANNADA**

**MARKING SCHEME**

**SUBJECT CODE - 015**

**CLASS - X**

**(2023 - 2024)**

**TIME: 3 HOURS** **MARKS: 80**

-----------------------------------------------------------------------------------------------

----

**PART – 1 (40 ಅಂಕಗಳು)**

**SECTION -A**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 10 ಅಂಕಗಳು.**

1. **ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **5X1=5**

I.B .ಇಕ್ಕೇರಿ

II. A.ಶ್ರೀರಂಗರಾಯ-III

III.D.ಇದೊಂದು ಬಿತ್ತನೆ ಸಾಮರ್ಥ್ಯದ ಘಟಕ

IV.C. ಮೊದಲಿನ ಹೇಳಿಕೆಯು ಮಾತ್ರ ಸರಿಯಾಗಿದೆ.

V. A. ಚಂದ್ರಗಿರಿ, ಬೇಕಲ್, ಅಡ್ಕ ಕೋಟೆ, ಆರಿಕ್ಕಾಡಿ

2. **ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **5X1=5**

I. A.ಚಂದದ ಪಟ್ಟಣ

II.D ಆಲೆ

III.C ಎರಡು ಹೇಳಿಕೆಗಳು ಸರಿಯಾಗಿವೆ.

IV. B.ಮರವನ್ನು ತರುವುದು, ಸಂಸ್ಕರಿಸುವುದು, ಕತ್ತರಿಸುವುದು, ಗೊಂಬೆಗಳನ್ನು ಕೊರೆಯುವುದು, ಬಣ್ಣ ಹಚ್ಚುವುದು, ಪಾಲಿಶ್ ಮಾಡುವುದು

V.D ಸಸ್ಯಜನ್ಯ

**3.** **ಕೆಳಗೆ ಕೊಟ್ಟಿರುವ ಡಾ. ಬನ್ನಂಜೆ ಗೋವಿಂದಾಚಾರ್ಯ ಅವರು ಬರೆದ 'ಶುಕನಾಸನ ಉಪದೇಶ' ಎಂಬ ಪಾಠವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **5x1=5**

I. **ದುಡ್ಡು ಯಾರ ಗೋಜಿಗೆ ಹೋಗುವುದಿಲ್ಲ?**

   ಉತ್ತರ: ದುಡ್ಡು ವಿದ್ಯಾವಂತನ ಗೋಜಿಗೆ ಹೋಗುವುದಿಲ್ಲ.

II. **ದುಡ್ಡು ಪಂಡಿತನನ್ನು ಕಂಡರೆ ಹೇಗೆ ನಡೆದುಕೊಳ್ಳುತ್ತದೆ?**

   **ಉತ್ತರ:**ದುಡ್ಡು ಪಂಡಿತನನ್ನು ಕಂಡರೆ ಪಾತಕಿಯನ್ನು ಮರುಳನನ್ನು ಕಂಡಂತೆ ನಡೆದುಕೊಳ್ಳುತ್ತದೆ.

III. **ಅಮೃತ ಮತ್ತು ಸಂಪತ್ತಿಗಿರುವ ವ್ಯತ್ಯಾಸವೇನು?**

**ಉತ್ತರ:** ಅಮೃತ ಸತ್ತವರನ್ನು ಬದುಕಿಸಿದರೆ ಸಂಪತ್ತು ಮನುಷ್ಯತ್ವವನ್ನೇ ಕೊಲ್ಲುತ್ತದೆ.

IV. **ದುಡ್ಡಿನ ಕಿಲುಬು ತಾಗಿದರೆ ಏನಾಗುತ್ತದೆ?**

**ಉತ್ತರ:** ದುಡ್ಡಿನ ಕಿಲುಬು ತಾಗಿದರೆ ಕದಡಿ ಕಲುಷವಾಗಿಬಿಡುತ್ತದೆ.

V. **ದುಡ್ಡು ಅಹಂಕಾರದ ಪಿಶಾಚಿಗಳಿಗೆ ಏನಾಗುತ್ತದೆ?**

ಉತ್ತರ: ಅಹಂಕಾರದ ಪಿಶಾಚಿಗಳಿಗೆ ನೆಲೆಮನೆಯಾದ ಹಳೆಯಟ್ಟದಂತಾಗುತ್ತದೆ.

**4. ಈ ಕೆಳಗೆ ಕೊಟ್ಟಿರುವ ಕುವೆಂಪು ಅವರು ಬರೆದಿರುವ 'ಹಸುರು' ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

**ಹಸುರು**

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ!
ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ!
ಅಶ್ವೀಜದ ಶಾಲಿವನದ
ಗಿಳಿಯೆದೆ ಬಣ್ಣದ ನೋಟ;
ಅದರೆಡೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ!
ಅದೊ ಹುಲ್ಲಿನ ಮಕಮಲ್ಲಿನ
ಪೊಸಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!
ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು!
ಹಸುರು ಹಸುರಿಳೆಯುಸಿರೂ!
ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್ನೆತ್ತರ್ ಒಡಲಿನಲಿ!

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **5X1 =5**

I. ಕವಿಗೆ ಯಾವುವು ಹಸುರಾಗಿ ಕಾಣುತ್ತದೆ.

ಉತ್ತರ: **ಕವಿಗೆ ಆಗಸ,ಮುಗಿಲು ಗದ್ದೆಯ ಬಯಲು ,ಹಸುರಿನ ಮಲೆ, ಕಣಿವೆ , ಸಂಜೆಯ ಬಿಸಿಲು ಹಸಿರಾಗಿ ಕಾಣಿಸುತ್ತದೆ.**

II. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?

**ಉತ್ತರ**: ಕವಿಯು ನೋಡಿದ ಅಡಕೆಯ ತೋಟ ಬನದಂಚಿನಲ್ಲಿದೆ.

III. ಕವಿಗೆ ಹಸುರು ಹುಲ್ಲು ಹೇಗೆ ಕಾಣುತ್ತದೆ.

ಉತ್ತರ: ಕವಿಗೆ ಹಸುರು ಹುಲ್ಲು ಮಕಮಲ್ಲಿನ ಜಮಖಾನೆಯಂತೆ ಕಾಣುತ್ತದೆ.

IV. ಆಶ್ವಯುಜ ಮಾಸದಲ್ಲಿ ಕವಿಗೆ ಭತ್ತದ ಗದ್ದೆಯು ಹೇಗೆ ಕಾಣುತ್ತದೆ.

ಉತ್ತರ:ಆಶ್ವಯುಜ ಮಾಸದಲ್ಲಿ ಕವಿಗೆ ಭತ್ತದ ಗದ್ದೆಯು ಗಿಳಿಯ ಬಣ್ಣದಂತೆ ಕಾಣುತ್ತದೆ.

V. ಹಸುರು ಪದ್ಯವನ್ನು ಬರೆದ ಕವಿ ಯಾರು?

**ಉತ್ತರ:** ಹಸುರು ಪದ್ಯವನ್ನು ಬರೆದ ಕವಿ ಕುವೆಂಪು.

**SECTION -B**

**(ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) = 20 ಅಂಕಗಳು.**

**5. ಕೆಳಗಿನ ಪ್ರತಿಯೊಂದು ಬಹು ಆಯ್ಕೆ ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 10X1=10**

I. ಕೆಳಗೆ ಕೊಟ್ಟಿರುವ ಸಂಧಿ - ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.

A. a-3 b-4 c-2 d-1

II. ಈ ಕೆಳಗಿನ ಪದಗಳಲ್ಲಿ ಸರಿಯಾದ ಸಮಾಸ ಪದಗಳನ್ನು ಹೊಂದಿಸಿ ಬರೆಯಿರಿ.

C 1 ಮತ್ತು 2

III. 'ಪೂದೋಟಮಂ' ಎಂಬ ಪದವು ದ್ವಿತೀಯಾ ವಿಭಕ್ತಿಯಾದರೆ **'ಧರ್ಮಬುದ್ಧಿಯುಂ'** ಎಂಬ ಪದವು ಈ ವಿಭಕ್ತಿಯಾಗಿದೆ.

C. ಪ್ರಥಮಾ

IV. ನದಿ, ಪರ್ವತ : ರೂಢನಾಮ : : ವ್ಯಾಪಾರಿ, ವಿಜ್ಞಾನಿ : -------

C. ಅನ್ವರ್ಥನಾಮ

V. 'ವಿದ್ಯಾರ್ಥಿಗಳು ಆಟದ ಬಯಲಿನಲ್ಲಿ ಆಟವನ್ನು ಆಡುವರು.' - ಈ ವಾಕ್ಯದಲ್ಲಿ ಕ್ರಿಯಾಪದ -----

D. ಆಡುವರು

VI. 'ಅರಿವೆ - ಹರಿವೆ' ಈ ಪದಗಳ ಅರ್ಥವ್ಯತ್ಯಾಸಗಳ ಕ್ರಮ ಹೀಗಿವೆ.

D. ಬಟ್ಟೆ -ಒಂದು ಬಗೆಯ ಸೊಪ್ಪು

VII. 'ದೃಗುಜಲ' - ಈ ಪದದ ಸಮಾನಾರ್ಥಕಪದ ------

B. ಕಣ್ಣನೀರು

VIII. ಹಿಮಾಲಯ ಪರ್ವತ ಪ್ರದೇಶವು ಭಾರತದ <u>ಉತ್ತರ</u> ಭಾಗದಲ್ಲಿದೆ. - ಈ ವಾಕ್ಯದಲ್ಲಿ ಗೆರೆ ಎಳೆದ ಪದವು ------- ವಾಚಕವಾಗಿದೆ.

D. ದಿಗ್ವಾಚಕ

IX. ಕೆಳಗೆ ಕೊಟ್ಟಿರುವ ತತ್ಸಮ- ತದ್ಭವಗಳ ಸರಿಯಾದ ರೂಪವನ್ನು ಗುರುತಿಸಿ ಬರೆಯಿರಿ.

.

B. b ಮತ್ತು c

X. ಈ ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆಯಿರಿ.

D. ಮಕ್ಕಳು ಮರಿ

**6.ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ.** **5X1 =5**

I. ಪ್ರಸ್ತುತ ದಿನಗಳಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರೂ ತಂತ್ರಜ್ಞಾನವನ್ನು ಬಳಸುತ್ತಾರೆ.

II. ಮರದ ಮೇಲೆ ಹಕ್ಕಿ ಕುಳಿತಿದೆ..

III. ಕಬಡ್ಡಿ ಪಂದ್ಯವನ್ನು ನೋಡಲು ಸಾವಿರಾರು ಜನರು ಬಂದಾರು.

IV.ಈ ಕೆಳಗಿನ ಗಾದೆಯ ಮಾತಿನ ಅರ್ಥವನ್ನು ಬರೆಯಿರಿ.

'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ' ಅರ್ಥ- ಒಂದು ಕೆಲಸವನ್ನು ಮಾಡಲು ಹೆಚ್ಚು ಸಮಯ ಬೇಕು ಹಾಳು ಮಾಡಲು ಒಂದು ಕ್ಷಣ ಸಾಕು.

ಅಥವಾ

'ಕೂಡಿ ಬಾಳಿದರೆ ಸ್ವರ್ಗಸುಖ'ಅರ್ಥ- ಒಟ್ಟಿಗೆ ಬಾಳಿದರೆ ನಮ್ಮೆಲ್ಲರ ಜೀವನ ಸುಖಮಯವಾಗಿರುತ್ತದೆ.(ಮಕ್ಕಳ ಆಲೋಚನೆ ತಕ್ಕಂತೆ ಅಂಕಗಳನ್ನು ನೀಡಬೇಕು)

V. ಮುಕ್ತ ಕಂಠ -ಆಟದಲ್ಲಿ ಗೆದ್ದ ಹಾಕಿ ತಂಡವನ್ನು ಜನರು ಮುಕ್ತಕಂಠದಿಂದ ಹೊಗಳಿದರು.

**7. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.**

**5X1=5**

I 'ಅನ್ ಟು ದಿಸ್ ಲಾಸ್ಟ್' ಈ ಪುಸ್ತಕವನ್ನು ಬರೆದವರು ----------

A. ರಸ್ಕಿನ್

II ದ್ರಾವಿಡ ಕಳಗಂ ಎಂಬ ಸಂಘಟನೆಯನ್ನು ಹುಟ್ಟುಹಾಕಿದವರು --------

D. ಪೆರಿಯಾರ್

III. ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ ಎಂದು ಹೇಳಿದವರು-----

C. ಜನರಲ್ ಡಯರ್

IV ಸ್ವದೇಶ ಸೂತ್ರದ ಸರಳ ಹಬ್ಬ ಈ ಪಾಠವನ್ನು ಬರೆದವರು --------

A. ಶಿವಾನಂದ ಕಳವೆ

V ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು------ ಸ್ವಾತಂತ್ರ್ಯವಾಗಿದೆ.

A. ಕ್ರಿಯಾ

**ಭಾಗ - B (40-ಅಂಕಗಳು)**

**SECTION -C**

(ಬರವಣಿಗೆ ಕೌಶಲ್ಯ) = 12 ಅಂಕಗಳು

8.ಪತ್ರಲೇಖನ 4

- ಇಂದ - ½
- ಅವರಿಗೆ - ½
- ದಿನಾಂಕ, ಸ್ಥಳ- ½
- ಮಾನ್ಯರೇ, ವಿಷಯ- ½

- ಪತ್ರದ ಒಡಲು - 1½
- ತಮ್ಮ ವಿಶ್ವಾಸಿ - ½

ಅಥವಾ

- ಇಂದ - ½
- ಅವರಿಗೆ - ½
- ದಿನಾಂಕ, ಸ್ಥಳ- ½
- ವಿಷಯ, ಉಲ್ಲೇಖ- ½
- ಸ್ವ-ವಿವರ - 1½
- ತಮ್ಮ ವಿಶ್ವಾಸಿ - ½

9. ವರದಿ 4

- ಶೀರ್ಷಿಕೆ — ½
- ಸ್ಥಳ ½
- ದಿನಾಂಕ - ½
- ವರದಿಯ ಒಡಲು --- 2
- ವರದಿಗಾರರ ರುಜು - - ½

10. ಪ್ರಬಂಧ

4

- ಪೀಠಿಕೆ -- 1
- ವಿಷಯ ವಿವರಣೆ - 2
- ಉಪಸಂಹಾರ/ಮುಕ್ತಾಯ - 1

**(ಪಠ್ಯಗಳ ಅಧ್ಯಯನ) =28 ಅಂಕಗಳು**

(ಪಠ್ಯಗಳ ಅಧ್ಯಯನ) =**28** ಅಂಕಗಳು

**11.** ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ. **4X2=8**

**I.** ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು**?**

ರಾಮನು ಗಿರಿವನಗಳನ್ನು ಕುರಿತು " ಗಿರಿವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು .ನನ್ನ ಪ್ರೀತಿಯರಾಣಿ ಸೀತೆಯು ನನಗೆ ದೊರೆಯುವಳೇ **?** ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ **?** ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ ' ಎಂದು ಪ್ರಾರ್ಥಿಸಿದನು .

**II.** ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು**?**

ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು **,** ಕಂಬನಿಯು ರಭಸದಿಂದ ಮುಂದೆ ಬಂದು **,** ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ " ಅಯ್ಯೋ **,** ದುರ್ಯೋಧನನಿಗೆ ಕೇಡಾಯಿತು " ಎಂದನು . ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ ಸುಮ್ಮನೆ ಹೋಗುವುದೆ . ಕೃಷ್ಣನು " ನನ್ನವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು " ಎಂದು ಮನದಲ್ಲಿ ನೊಂದುಕೊಂಡನು .

III. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

**ಉತ್ತರ:** ವರ್ಣಾಶ್ರಮ ಧರ್ಮದ ಪರವಾಗಿ ಕಾಂಗ್ರೆಸ್ಸಿದೆ ಎಂದು ಅದಕ್ಕೆ ಪರ್ಯಾಯವಾದ ದ್ರಾವಿಡ ಚಳುವಳಿ ಎಂಬ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳುವಳಿಯನ್ನು ರೂಪಸಿದರು. ತಮಿಳು ಭಾಷೆಯನ್ನು ದ್ರಾವಿಡರ ಭಾಷೆ ಎಂದರು.

ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿ ಹಿಡಿದರು.ಮೊದಲಿಗೆ ಆರಂಭವಾಗಿದ್ದ ಬ್ರಾಹ್ಮಣೇತರ ಚಳುವಳಿಯನ್ನು ಪರಿವರ್ತಿಸಿದರು.

5. ಎಲ್ಲ ಬಗೆಯ ಶೋಷಣೆಗಳಿಂದ ಹೊರಬಂದು ಸರ್ವಧರ್ಮ ಸಹಿಷ್ಣುತೆಯ ಸಮಾಜ ರೂಪುಗೊಳ್ಳಬೇಕು ಎಂದರು.

**IV.**ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ-ಏಕೆ**?**

ಆದರ್ಶವಾಗಿದ್ದ ನೆಲದಲ್ಲಿ ಆಡಂಬರ**,** ರಂಗು**,** ನಾಟಕೀಯತೆ ಸೇರಿಕೊಂಡು ಬದುಕು ಲಗಾಮಿಲ್ಲದ ಓಟ ಕಿತ್ತಿದೆ. ಸಂಪ್ರದಾಯ ದೇವರ ನಂಬಿಕೆಗಳಿಗಿಂತ ಹಬ್ಬಗಳು ಖರೀದಿಯ ಸವಾಲು ಒಡ್ಡಿ ಮನೆ ಮನಗಳನ್ನು ಕಾಡುತ್ತಿವೆ. ರಾತ್ರಿ ಹಗಲಾಗಿಸುವ ವಿದ್ಯುತ್ ದೀಪಾಲಂಕಾರದಲ್ಲಿ ಪರದೇಶಿ ಚೈನಾ ಬಲ್ಬ್ ಮೆರೆದಿವೆ! ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ.

**12.** ಈ ಕೆಳಗಿನ ಪ್ರಶ್ನೆಗಳಿಗೆ **5-6** ವಾಕ್ಯಗಳಲ್ಲಿ ಉತ್ತರಿಸಿ. **2X3= 6**

**I.** ವ್ಯಕ್ತಿಗಳನ್ನು ಆದರ್ಶವಾಗಿ ಸ್ವೀಕರಿಸಲು ಇರುವ ತೊಡಕುಗಳೇನು**?**

ವ್ಯಕ್ತಿಗಳನ್ನು ಆದರ್ಶವಾಗಿ ಸ್ವೀಕರಿಸಲು ಕೆಲವು ತೊಡಕುಗಳಿವೆ . ನಾವು ಯಾರನ್ನು ಸದ್ಗುಣಗಳ ಸಾಕಾರ ಸ್ವರೂಪನೆಂದೂ **,** ಸರ್ವಥಾ ಪ್ರಮಾದಾತೀತನೆಂದೂ ಭಾವಿಸುವವೋ ಆ ವ್ಯಕ್ತಿಯೇ ನಮ್ಮ ಆದರ್ಶವಾಗಬೇಕು . ಇಲ್ಲವಾದಲ್ಲಿ ಆದರ್ಶವೆಂದು ಭಾವಿಸಲ್ಪಟ್ಟ ವ್ಯಕ್ತಿಯಿಂದ ಏನಾದರೂ ತಪ್ಪಾದರೆ ನಾವು ಬೇರೊಬ್ಬನನ್ನು ಹುಡುಕಬೇಕಾಗುತ್ತದೆ . ಆ ಎರಡನೆಯವನಲ್ಲಿ ದೋಷ ಕಂಡುಬಂದರೆ **,** ಅವನ ಬಗ್ಗೆ ಇರುವ ಶ್ರದ್ಧೆ ಸಹ ಹಾರಿಹೋಗುವುದು ಸ್ವಾಭಾವಿಕ **,** ಆಗ ಮನಃ ನಾವು ಮೂರನೆಯ ವ್ಯಕ್ತಿಯನ್ನು ಹುಡುಕುವಂತೆ ಆದೀತು **,** ಹೀಗಾದರೆ ನಿತ್ಯವೂ ಹೊಸ ಹೊಸ ವ್ಯಕ್ತಿಯನ್ನು ಆದರ್ಶಕ್ಕಾಗಿ ಹುಡುಕುತ್ತ ಹೊರಡಬೇಕಾಗುತ್ತದೆ .

**II.** ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**?**

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು , ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು . ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು . ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು .

**13.** ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಹಾಗೂ ಸ್ವಾರಸ್ಯದೊಡನೆ ವಿವರಿಸಿ. **2X3= 6**

**I.**"ಸಾಮಾಜಿಕ ಕಾನೂನುಗಳ ಹರಿಕಾರ"

ಆಯ್ಕೆ : - ಈ ವಾಕ್ಯವನ್ನು ' ಭಾಗ್ಯಶಿಲ್ಪಿಗಳು ' ಗದ್ಯದಲ್ಲಿರುವ ಪಠ್ಯಪುಸ್ತಕ ಸಮಿತಿಯು ಸಂಗ್ರಹಿಸಿ ನೀಡಿರುವ ನಾಲ್ವಡಿ ಕೃಷ್ಣರಾಜ ಒಡೆಯರು " ಭಾಗದಿಂದ ಆರಿಸಿಕೊಳ್ಳಲಾಗಿದೆ .

ಸಂದರ್ಭ : - ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ . ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣ ಮಾಡಿದರು . ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು . ' ಸಾಮಾಜಿಕ ಕಾನೂನುಗಳ ಹರಿಕಾರ ' ಎಂದು ಹೆಸರಾದರು **,** ಸಾಹಿತ್ಯ **,** ಸಂಗೀತ **,** ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು .

ಸ್ವಾರಸ್ಯ : - ಸ್ವತಃ ರಾಜರಾಗಿ ಕೇಂದ್ರೀಕೃತ ವ್ಯವಸ್ಥೆಗೆ ಬದಲಾಗಿ ಆಡಳಿತದಲ್ಲಿ ವಿಕೇಂದ್ರೀಕೃತ ವ್ಯವಸ್ಥೆ ತಂದು ಸಾಮಾಜಿಕ ಕಾನೂನುಗಳನ್ನು ಜಾರಿಗೊಳಿಸಿದ ಒಡೆಯರಿಗೆ ಈ ಬಿರುದು ನೀಡಿರುವುದು ಒಪ್ಪುವಂತಾದ್ದಾಗಿದೆ

ಅಥವಾ

ಪೊನ್ನನೆಲ್ಲಮಂ ನೀನೆ ಕೊಂಡೆ"

ಆಯ್ಕೆ : ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ " ಕರ್ನಾಟಕ ಪಂಚತಂತ್ರ " ಕೃತಿಯಿಂದ ಆಯ್ದ ' ವೃಕ್ಷಸಾಕ್ಷಿ ' ಎಂಬಗದ್ಯಪಾಠದಿಂದ ಆರಿಸಲಾಗಿದೆ .

ಸಂದರ್ಭ : - ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ

ಮುಚ್ಚಿ ತಾನೇ ಧರ್ಮಬುದ್ಧಿಯ ಹತ್ತಿರ ಬಂದು " ಖರ್ಚಿಗೆ ಹೊನ್ನು ಇಲ್ಲ , ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬಾ " ಎಂದು ಜೊತೆಯಲ್ಲಿ

ಕರೆದುಕೊಂಡು ಹೋಗಿ , ಹೊತಿಟ್ಟ ಸ್ಥಳದಲ್ಲಿ ಹೊನ್ನನ್ನು ಕಾಣದೆ ಇದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ .

ಸ್ವಾರಸ್ಯ : - ದುಷ್ಟಬುದ್ಧಿಯು ಇನ್ನು ಮಾತನಾಡದಿದ್ದರೆ ಅಪವಾದವು . ತನ್ನ ಮೇಲೆ ಬರುವುದೆಂದು ಹೊನ್ನೆಲ್ಲವನ್ನು ನೀನೆ ತೆಗೆದುಕೊಂಡಿದ್ದೀಯೆ " ಎಂದನು ಎಂದು ಕವಿ ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ .

**II.** ಜೀವ ಸತ್ತು ಹೋಗುವುದು ಗೊತ್ತ"

ಆಯ್ಕೆ : -ಈ ವಾಕ್ಯವನ್ನು ಡಾ . ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ ' ಕನ್ನಡ ಜನಪದ ಗೀತೆಗಳು ' ಕೃತಿಯಿಂದ ಆಯ್ದ ' ಹಲಗಲಿಯ ಬೇಡರು ' ಎಂಬ ಲಾವಣಿಯಿಂದ ಆರಿಸಲಾಗಿದೆ

ಸಂದರ್ಭ : - ಬ್ರಿಟಿಷರ ಆಜ್ಞೆಯನ್ನು ಹೊರಡಿಸಿ , ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ , ಬ್ಯಾಡರ ಬಾಲ , ಜಡಗ , ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ , ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ .

ಸ್ವಾರಸ್ಯ : - ಹಲಗಲಿಯ ಬೇಡರು " ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು " ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ .

ಅಥವಾ

"ಪ್ರೀತಿಯ ಹಣತೆಯ ಹಚ್ಚೋಣ"

ಆಯ್ಕೆ :- ಈ ವಾಕ್ಯವನ್ನು ಕವಿ 'ಜಿ.ಎಸ್. ಶಿವರುದ್ರಪ್ಪ' ಅವರು ರಚಿಸಿರುವ 'ಎದೆತುಂಬಿ ಹಾಡಿದೆನು'ಕವನ ಸಂಕಲನದಿಂದ ಆಯ್ದ 'ಸಂಕಲ್ಪಗೀತೆ'ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ :- ಮಾನವರ ದುರ್ವರ್ತನೆಯಿಂದ ಕಲುಷಿತವಾಗಿರುವ ನದೀಜಲಗಳ ಶುದ್ಧೀಕರಣ ಹೇಗಾಗಬೇಕೆಂಬ ಭಾವ ಕವಿಯ ಮನದಲ್ಲಿ ಮೂಡಿದಾಗ ಮುಂಗಾರಿನ ಮಳೆಯಾಗಿ ಕಲ್ಮಶಗಳನ್ನು ಕೊಚ್ಚಿಕೊಂಡು ಹೋಗಬೇಕು , ಬರಡಾಗಿರುವ ಕಾಡು-ಮೇಡುಗಳಿಗೆ ವಸಂತವಾಗಬೇಕೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :- ಮುಂಗಾರಿನ ಮಳೆ ಕಲ್ಮಶಗಳನ್ನು ಕೊಚ್ಚಿಕೊಂಡು ಹೋದಂತೆ ಹೊಸಸಂಕಲ್ಪ ಜನರ ಮನದ ಕಲ್ಮಶಗಳನ್ನು ಕಳೆದು ಬದುಕನ್ನು ಸಮೃದ್ಧವಾಗಿಸಬೇಕು ಎಂದು ಕವಿ ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ

**14.** ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1X4=4**

**I.**ವೃಕ್ಷಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು**?** ಏಕೆ**?**

' ವೃಕ್ಷಸಾಕ್ಷಿ ' ಪಾಠದಲ್ಲಿ ನಾವು ಮೆಚ್ಚುವ ಪಾತ್ರ ಧರ್ಮಬುದ್ಧಿಯದು . ಧರ್ಮಬುದ್ಧಿಯು ವ್ಯಾಪಾರಿ ಆದರೂ ಕಪಟವರಿಯದ ಸತ್ಯವಂತ , ಆಧ್ಯಾತ್ಮಿಕ ಮನೋಭಾವವುಳ್ಳವನು . ಸೂರ್ಯೋದಯಕ್ಕೆ ಮೊದಲೇ ಎದ್ದು ನಿತ್ಯಕರ್ಮ ಮುಗಿಸಿ ದೇವರು , ಗುರುಗಳು , ವೇದಾಧ್ಯಯನ ನಿರತರನ್ನು ಪೂಜಿಸುವವನು , ದುಷ್ಟಬುದ್ಧಿಯು ಮರದ ಪೊಟರೆಯೊಳಗೆ ತಂದೆಯನ್ನು ಕೂರಿಸಿ ಧರ್ಮಬುದ್ಧಿಯೇ ಚಿನ್ನ ಕದ್ದನೆಂದು ಹೇಳಿಸಿದಾಗಲೂ ಧರ್ಮಬುದ್ಧಿ ಕೂಗಾಡಲಿಲ್ಲ . ಶಾಂತನಾಗಿಯೇ ಇದ್ದನು . ಅವನಿಗೆ ದೇವರ ಮೇಲೆ ನಂಬಿಕೆ , ದೇವರಿದ್ದರೆ ಸತ್ಯವೇ ಹೊರಬರಬೇಕಿತ್ತು ಎಂಬುದು ಅವನ ಅನಿಸಿಕೆ , ಮರವನ್ನು ಪರೀಕ್ಷಿಸಬೇಕೆಂದು ಮರವನ್ನು ಸುತ್ತಿದಾಗ ಅಲ್ಲಿ ಮನುಷ್ಯ ಸಂಚಾರವಾಗಿರುವುದನ್ನು ಬುದ್ಧಿವಂತಿಕೆಯಿಂದ ಕಂಡುಕೊಂಡನು . ದುಷ್ಟಬುದ್ಧಿಗೆ ಬುದ್ಧಿಕಲಿಸುವ ಚಾಣಾಕ್ಷತನವನ್ನು ಮೆರೆಯುತ್ತಾನೆ . " ಸುಳ್ಳನ್ನು ಸುಳ್ಳಿನಿಂದಲೇ : ಮುಳ್ಳನ್ನು ಮುಳ್ಳಿನಿಂದಲೇ ಜಯಿಸುವಂತೆ "

ಧರ್ಮಬುದ್ಧಿಯು ತಂತಬುದ್ಧಿಯಿಂದ ತನಗೆ ಒದಗಿದ್ದ ಕೆಟ್ಟ ಹೆಸರನ್ನು ಹೋಗಲಾಡಿಸಿ ಕೊಂಡನು . ಆದ್ದರಿಂದ ಸತ್ಯವಂತನಾದ ಧರ್ಮಬುದ್ಧಿ ಮೆಚ್ಚುಗೆಗೆ ಪಾತ್ರನಾಗುತ್ತಾನೆ .

ಅಥವಾ

ಶಬರಿಯ ಚಿಂತೆ ಹಿಂಗಿ ಹೋದ ಸ್ವಾರಸ್ಯವನ್ನು ವಿವರಿಸಿ.

ರಾಮಲಕ್ಷ್ಮಣರನ್ನು ಕಂಡು ಶಬರಿ ಹಿಗ್ಗಿ , ಸಂತಸವನ್ನು ತುಂಬಿಕೊಳ್ಳುತ್ತಾಳೆ . ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ . ರಾಮನನ್ನು ಕಂಡ ತಾನು ಪರಮಸುಖಿಯೆಂದು ನರ್ತಿಸುತ್ತಾಳೆ . ರಾಮನೂ ಕೂಡ " ನಿನ್ನ ಆದರದಿಂದ ನಾವು ಸುಖ , ನಿನಗೆ ನಾವು ಋಣಿ " ಎನ್ನುತ್ತಾನೆ . ಶಬರಿಯು ಕಣ್ಣೀರು ತುಂಬಿಕೊಂಡು " ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ , ಹಸಿವು ತೃಷೆ ಹಿಂಗಿತೇ ? ನಾನೊಬ್ಬಳು ಬಡವಿ , ನನ್ನ ಮೇಲೆ ಮರುಕ ತೋರಿದಿರಾ ? " ಎನ್ನುತ್ತಾಳೆ . ಶ್ರೀರಾಮನು " ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ . ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ , ನಿನ್ನ ಮನೆಯೇ ನಮ್ಮಮನೆ , ನೀನೇ ತಾಯಿಯಂತೆ " ಎನ್ನುತ್ತಾನೆ . ಶಬರಿಯು " ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ , ನಾನು ಧನ್ಯಳಾದ ಸಿದ್ಧ ಮಾತಂಗರ ವರ ನನಗೆ ಫಲಿಸಿತು . ನಿಮ್ಮನ್ನು ಕಂಡು ಪುಣ್ಯವು ತುಂಬಿತು . ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು . ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು " ಎನ್ನುತ್ತಾಳೆ . ಶ್ರೀರಾಮನು ಗುರುಗಳ ಮಹಿಮೆಯನ್ನು ಬಲ್ಲೆನೆಂದು ಹೇಳುತ್ತ " ದುಃಖವನ್ನು ಮರೆಸಿ , ಶಾಂತಿ ನೀಡುವ ಈ ವನದಲ್ಲಿ ನೀನು ಶುದ್ಧ ಪ್ರೇಮಮೂರ್ತಿಯಾಗಿದ್ದೀಯೆ . ಈ ದಿನ ನಮಗೆ ಸುದಿನ " ಎಂದು ಶಬರಿಯನ್ನು ಬಾಯಿತುಂಬ ಹೊಗಳುತ್ತಾನೆ .

**15.** ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1X4=4**

**I.**ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ**?**

ನಮ್ಮ ಜೀವನದಲ್ಲಿ ಧನಾತ್ಮಕ ಭಾವನೆಯನ್ನು , ದೃಢಸಂಕಲ್ಪವನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ನಮ್ಮ ಜೀವನಯೆಂಬ ಹಡಗಿನ ಸುತ್ತಮುತ್ತಲು ಕವಿದಿರುವ ಅಜ್ಞಾನಯೆಂಬ ಕತ್ತಲೆಯನ್ನುಹೋಗಲಾಡಿಸಲು ಪ್ರೀತಿಯೆಂಬ ಅರಿವಿನ(ತಿಳುವಳಿಕೆಯ)ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಅಜ್ಞಾನದಿಂದ ಬಿರುಗಾಳಿಗೆ ಹೊಯ್ದಾಡುತ್ತಾ ಎತ್ತೆತ್ತಲೋ ಸಾಗುತ್ತಿರುವ ಬಾಳನೌಕೆಯನ್ನು ಜ್ಞಾನಯೆಂಬ ಹಣತೆಯ ಮೂಲಕ ಎಚ್ಚರಿಕೆಯಿಂದಗುರಿಯತ್ತ ಮುನ್ನಡೆಸುವ ಸಂಕಲ್ಪಕೈಗೊಳ್ಳಬೇಕು .ವಸಂತಕಾಲದ ಆಗಮನ ಬರಡಾಗಿರುವ ಕಾಡು-ಮೇಡುಗಳಲ್ಲಿ ಮರಗಿಡಗಳು ಸಮೃದ್ಧವಾಗಿ ಚಿಗುರಿ ಪ್ರಕೃತಿಗೆ ನವ್ಯಚೈತನ್ಯವನ್ನು ತಂದುಕೊಡುವ ಹಾಗೇಯೇ ಕಲುಷಿತವಾಗಿರುವ ಮನಸ್ಸುಗಳನ್ನು ಹಸನುಗೊಳಿಸಬೇಕು.ಶೋಷಣೆಗೂಳಗಾದ ಜನರನ್ನು ಎಲ್ಲರಂತೆ ಸಮಾನವಾಗಿ ಬದುಕುವ ಹೊಸ ¨ ಭರವಸೆಗಳನ್ನು ಮೂಡಿಸಬೇಕು. ಭಾಷೆ, ಜಾತಿ, ಮತಧರ್ಮಗಳ ¨ಬೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ.ಅವುಗಳನ್ನು ಕೆಡವಿ, ಮನುಜ ಮನುಜರ ನಡುವೆ ಪ್ರೀತಿ, ಸ್ನೇಹ, ವಿಶ್ವಾ¸ಸದ ಸೇತುವೆಯಾಗುವ ಸಂಕಲ್ಪ ಕೈಗೊಳ್ಳಬೇಕು.ಮತಪಂಥಗಳೆಲ್ಲವೂ ಸಾಧನೆಯ ದಾರಿಗಳು, ನಮ್ಮ ಉತ್ತಮ ಜೀವನಕ್ಕೆ ಬೆಳಕಾಗಬಲ್ಲ, ಮುಕ್ತಿಯನ್ನು ನೀಡಬಲ್ಲ, ಸನ್ಮಾನಕ್ಕೆ ಕರೆದುಕೊಂಡುಹೋಗುವ ಮಾರ್ಗಗಳೆಂದು ತಿಳಿದು ಎಚ್ಚರಿಕೆಯಲ್ಲಿ ನಾವು ಬದುಕಬೇಕು. ¨ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ಸಮಾಜವನ್ನು ಸ್ವಾಸ್ಥ್ಯದ ನೆಲೆಯಾಗಿಸುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು ಎಂಬುದು ಕವಿಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.

ಅಥವಾ

ಕರ್ಣನಿಗೆ ಶ್ರೀಕೃಷ್ಣನು ನೀಡಿದ ಆಮಿಷಗಳೇನು**?** ವಿವರಿಸಿ

ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ . ನಿನ್ನಾಣೆ , ನೀನು ನಿಜವಾಗಿ ಭೂಮಿಯ ಒಡೆಯ . ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ " ಎಂದು ಹೇಳುತ್ತ ಕರ್ಣನ ಜನ್ಮವೃತ್ತಾಂತವನ್ನು ಹೇಳಿದ ಕೃಷ್ಣನು ' ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು . ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು . ನಿನಗೆ ಎರಡು

ವಂಶವು ಮರುಮಾತನಾಡದೆ ಸೇವೆಯನ್ನು ಮಾಡುವುವು . ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ ಹೇಳು . ಎಡಭಾಗದಲ್ಲಿ ಕೌರವೇಂದರ ಸಮೂಹ , ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ , ಮುಂದುಗಡೆ ಮಾದ , ಮಾಗಧ , ಯಾದವಾದಿಗಳು , ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ಸೊಬಗನ್ನು ತೊರೆದು , ದುರ್ಯೋಧನ ಹೇಳಿದ ಮಾತಿಗೆಲ್ಲಾ ಒಡೆಯ ಪ್ರಸಾದ , ಅನುಗ್ರಹವಾಗಲಿ ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ **?** " ಎಂದು ಆಮಿಷ ಒಡ್ಡಿದನು